


ಎಡದಿಂದ ಬಲಕ್ಕೆ:
1. ಉದ್ದೇಶ ಏನೇ ಇರಲಿ, ಒಟ್ಟಿನಲ್ಲಿ ಬುದ್ಧಿವಾದ (4)
3. ಬಲದಲ್ಲಿ ಮಿಗಿಲು. ಜೊತೆಗೆ ಚೆನ್ನಾಗಿ ತಿಳಿದವ ಕೂಡ (3)
4. ಜುಮ್ಮೆನಿಸುವಂತಿದೆ, ಅಂಥ ಅದ್ಭುತ ಭಾಷಾಂತರ (3)
6. ಕಕ್ಷೆಯಲ್ಲೆಲ್ಲೋ ಕಂಡೀತೇ, 'ದೇವತಾ ಪ್ರಪಂಚ?' (4)
7. ಆಕಾರ ಏನೇ ಇರಲಿ, ಅದೊಂದು ಮೊಳಕೆ ಹೌದು (3)
9. ಅಂಗಾಲಿನ ಉದ್ದಕ್ಕೆ ಇಂಚು ಸಾಕೇ? (3)
11. ಜುಟ್ಟನ್ನು ಕಟ್ಟಿಲ್ಲ, ಅದು ಸುಲಭವೂ ಅಲ್ಲ (3)
13. ಕ್ಷೀರ ತರುವ ಗಾಡಿ, ಪೂರ್ಣ ಕಾವಲಿನಲ್ಲಿ (3)
15. ಹತ್ತೂರಿನ ಹೊಣೆ, ಸಂತರಿಗೆ ವರ್ಗಾವಣೆ (4)
17. ಕೆಲಸವನ್ನು ತೊರೆದದ್ದು ಭಾರೀ ನಷ್ಟ (3)
18. ಸುಂದರ ಕರಂಡಕದಲ್ಲಿ ಮಳೆ ನಕ್ಷತ್ರವೇ? (3)
19. ಜೇನು ಬೆರೆತ ತಿಂಗಳೆಂದರೆ ಚೈತ್ರ ತಾನೇ? (4)

ಮೇಲಿಂದ ಕೆಳಕ್ಕೆ:
1. ವಿಧೇಯನಾಗಿರಬೇಕೆಂಬ ಭಾವ ಉದ್ಭವಿಸಿದೆ (3)
2. ತಪ್ಪಿದ ಅವಕಾಶಗಳು ಒಂದು ನೂರು (3)
3. ಕಂಬದ ನೆರಳಲ್ಲೇ ಇಡೀ ಜೀವನ (3)
5. ಮಾರ್ಗದುದ್ದಕ್ಕೂ ಅಬ್ಬ, ಎಂಥ ಹೊಳಪು! (3)
7. ಅಂಜುಬುರುಕನ ಕೈಯಲ್ಲಿ ಕಮಲ ಹೇಗೆ? (3)
8. ಸುರಲೋಕದಲ್ಲೂ ಅದೇ ಮಾವು (3)
9. ಅಜ್ಜರಿಗೂ ಪ್ರಿಯ– ಅಪರೂಪದ ಹಣ್ಣು (3)
10. ತೇಲುತ್ತ ತೇಲುತ್ತ ಬಂದ ವಸ್ತು, ಎಷ್ಟು ಸುಂದರ! (3)
12. ಸಾಟಿ ಎಲ್ಲೂ ಇಲ್ಲ. ಹಾಗೆ ಮೂಡಿದೆ ಕೊಂಬೆ (3)
14. ಪ್ರಾಣಿ–ಪಕ್ಷಿಗಳನ್ನೂ ಧ್ವಂಸ ಮಾಡುತ್ತದೆ ಹಾರಿ ಬೀಳುವ ಅಸ್ತ್ರ (3)
15. ಮೊಹರನ್ನು ಹಾಕುವಾಗಲೆಲ್ಲ ರಾಮಭಂಟನದೇ ನೆನಪು (3)
16. ಸಭಾಸದರ ಮಾತಿನಲ್ಲಿ ಎಂಥ ವೇಗ! (3)

### ಪದಬಂಧ 15-11-2012 ರ ಉತ್ತರಗಳು

ಎಡದಿಂದ ಬಲಕ್ಕೆ:
1. ಅದ್ಭುತ; 3. ದಮನ; 4. ರುಸುಮು; 6. ಆವರಣ; 7. ಅಂಗರಾಗ; 9. ದನಗಾಹಿ; 11. ಕರಿಬೇವು; 15. ಲಡಾಯಿ; 16. ಗಲೀಜು; 17. ತರಳೆ.

ಮೇಲಿಂದ ಕೆಳಕ್ಕೆ:
1. ಅನಲ; 2. ತರುಣ; 3. ದಸರ; 5. ಮುರುಗ; 6. ಆನಂದ; 8. ಗಡುವು; 10. ಗಾವಿಲ; 12. ರಿವಾಜು; 13. ತಾಯಿತ; 14. ರಗಳೆ.

# ಪ್ರಶ್ನಾಂಕಣ

## ಆನೆ ಪೂರ್ವಜರು ಯಾರು ಯಾರು?

ಆನೆ–ಅತ್ಯಂತ ಬೃಹತ್ ನೆಲವಾಸಿಯಾಗಿರುವ ಈ ಪ್ರಾಣಿ ಅನನ್ಯ ಅಂಗವಾದ ಸೊಂಡಿಲಿನಿಂದ, ಜೋಡಿ 'ದಂತ'ದಿಂದ, ತೀಕ್ಷ್ಣ ಸ್ಮರಣ ಶಕ್ತಿಯಿಂದ, ಸೂಕ್ಷ್ಮ ಭಾವನೆಗಳಿಂದಲೂ ಸುಪ್ರಸಿದ್ಧ. ಗರಿಷ್ಠ ದೇಹ ಶಕ್ತಿ ಇದ್ದೂ ಮನುಷ್ಯರ ಸಾಕು ಪ್ರಾಣಿಯಾಗಿ, ವಿನೀತ ಕಿಂಕರ ಕೂಡ ಆಗಿರುವುದು ಆನೆ ಬದುಕಿನ ಒಂದು ವಿಪರ್ಯಾಸ.

ಆನೆಗಳದು ಧರೆಯಲ್ಲಿ ಐದೂವರೆ ಕೋಟಿ ವರ್ಷಗಳ ಇತಿಹಾಸ. ಸ್ತನಿ ವರ್ಗದ ಒಂದು ಕವಲಾಗಿ ಆಗಿನ ಆಫ್ರಿಕಾದಲ್ಲಿ ಅವತರಿಸಿದ ಮೂಲ ಗಜ ಪಿತಾಮಹರ ರೂಪವಾಗಲೀ, ಗಾತ್ರವಾಗಲೀ ಈಗಿನ ಆನೆಗಳನ್ನು ಸ್ವಲ್ಪವೂ ಹೋಲುವಂತಿರಲಿಲ್ಲ. ವಿಸ್ಮಯ ಏನೆಂದರೆ, ಆನೆಗಳ ಆದ್ಯ ಪ್ರವರ್ತಕ 'ಹಂದಿ'ಯನ್ನು ಹೋಲುವಂತಿತ್ತು! (ಚಿತ್ರ–1). ಪಳೆಯುಳಿಕೆ ತಜ್ಞರು 'ಮೋಯಿಥೀರಿಯಂ' ಎಂದು ಹೆಸರಿಸಿರುವ ಆ ವರಾಹ ರೂಪಿಯಲ್ಲಿ ಸೊಂಡಿಲು ಮತ್ತು ಕೋರೆ ದಂತಗಳ ಕುರುಹೂ ಇರಲಿಲ್ಲ.




ಮೋಯಿಥೀರಿಯಂನಿಂದ ವಿಕಾಸಗೊಂಡ 'ಡೈನೋಥೀರಿಯಂ' ಸೊಂಡಿಲನ್ನು ಪಡೆದಿತ್ತು (2). ಜೊತೆಗೆ ಕೆಳದವಡೆಯಿಂದ ಚಾಚಿ ಹಿಮ್ಮುಖವಾಗಿ ಬಾಗಿದ್ದ ಒಂದು ಜೋಡಿ ದಂತಗಳನ್ನೂ ಅದು ಹೊಂದಿತ್ತು. ಈಗ್ಗೆ ಸುಮಾರು ಮೂರು–ಕೋಟಿ ವರ್ಷ ಹಿಂದೆ ವಿಕಸನಗೊಂಡ ಆನೆ ಪೂರ್ವಜ 'ಪೇಲಿಯೋ ಮ್ಯಾಸ್ಟೋಡಾನ್' ನಾಲ್ಕು ಕೋರೆಗಳನ್ನು ಹೊಂದಿತ್ತು (3). ಆ ನಂತರ ಉಗಮಗೊಂಡ 'ಮಾಮ್ಮುಟ್' (4) ಭಾರೀ ಗಾತ್ರದ ತುಂಬ ಉದ್ದದ ಸೊಂಡಿಲನ್ನೂ, ಬಲಿಷ್ಠವಾದ ಒಂದೇ ಜೊತೆ ದಂತವನ್ನೂ ಧರಿಸಿತ್ತು.

ಈಗ್ಗೆ 38 ರಿಂದ 26 ದಶಲಕ್ಷ ವರ್ಷ ಹಿಂದಿನ 'ಗಾಂಫೊಥೀರಿಯಂ' ಮತ್ತೆ ನಾಲ್ಕು ಕೋರೆಗಳನ್ನು ಪಡೆದಿತ್ತು (5). ಅದೇ ಸುಮಾರಿಗೆ ಆನೆಗಳಿಗೆ ನೇರ ಸಂಬಂಧಿಯಲ್ಲದ ಮಹಾನ್ ಕೋರೆಗಳ ಮತ್ತೊಂದು ಗಜರೂಪಿ ಕೂಡ (ಸ್ಟೀಗೋಡಾನ್ (6). ಅವತರಿಸಿತ್ತು. ಗಾಂಫೊಥೀರಿಯಂ ನಂತರದ ಗಜ ಪಿತಾಮಹ 'ಪ್ರೈಮಿಲಿಫಾಸ್' (7). ಭಿನ್ನ ರೂಪದ ನಾಲ್ಕು ದಂತಗಳನ್ನು ಹೊಂದಿತ್ತು.

ಈಗ್ಗೆ ಎರಡು ದಶಲಕ್ಷ ವರ್ಷ ಹಿಂದಿನ ವೇಳೆಗೆ ವಿಕಾಸಗೊಂಡಿದ್ದ ಮಹಾಗಜ 'ಮ್ಯಾಮತ್' (8). ನಿಂದಲೇ ಈಗಿನ ಆನೆಗಳು ಮೈದಳೆದದ್ದು. ಬಹು ಬೃಹತ್ ಶರೀರದ, ರೋಮಭರಿತ ಮೈನ, ಭಾರೀ ಬಾಗಿನ ಸುದೀರ್ಘ ದಂತ ಜೋಡಿಯ ಈ ಆನೆಯೇ ಸದ್ಯದ ಎರಡೂ ಕುಟುಂಬಗಳ ಎಂದರೆ ಏಷಿಯನ್ ಆನೆ (9). ಮತ್ತು ಆಫ್ರಿಕನ್ ಆನೆಗಳ (10). ಪೂರ್ವಜ.

■ ಎನ್. ವಾಸುದೇವ್